## ಸಮ್ಮೇಳನದಲ್ಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಭಾಗಿ

# ಫೆ.1ರಿಂದ ಅಭಿವೃದ್ಧಿ ಶೃಂಗ-2020

**ವಿಕ ಸುದ್ದಿಲೋಕ** ಹುಬ್ಬಳ್ಳಿ

ದೇಶಪಾಂಡೆ ಫೌಂಡೇಶನ್ ವತಿಯಿಂದ ಫೆಬ್ರವರಿ 1 ಮತ್ತು 2ರಂದು ಅಭಿವೃದ್ಧಿ ಶೃಂಗ-2020 ಹಾಗೂ ನವೋದ್ಯಮಿಗಳ ಸಮ್ಮೇಳನ ಆಯೋಜಿಸಲಾಗಿದ್ದು, ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಪಾಲ್ಗೊಳ್ಳಲಿದ್ದಾರೆ ಎಂದು ಫೌಂಡೇಶನ್ ಸಂಸ್ಥಾಪಕ ಗುರುರಾಜ್ ದೇಶಪಾಂಡೆ ಅವರು ತಿಳಿಸಿದರು.

### ದೇಶದ ವಿವಿಧ ಸಾಧಕರು, ನೀತಿ ನಿರೂಪಕರು ಭಾಗಿ

### ಕೃಷಿ ಅಭಿವೃದ್ಧಿ, ಸಣ್ಣ ಉದ್ಯಮ ಬೆಳವಣಿಗೆ ಸಂವಾದ



ನವೋದ್ಯಮಿ ಸಮ್ಮೇಳನ ಬಗ್ಗೆ ಗುರುರಾಜ ದೇಶಪಾಂಡೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ಕೃಷಿ ಹೊಂಡ ಬೇಡಿಕೆ**

ಕೃಷಿ ಹೊಂಡಗಳ ನಿರ್ಮಾಣ ಮತ್ತು ಕೃಷಿ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ದೇಶಪಾಂಡೆ ಫೌಂಡೇಶನ್ ಜಿಲ್ಲೆಯಲ್ಲಿ ಹಲವು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. 1500 ಕೃಷಿ ಹೊಂಡ ನಿರ್ಮಿಸಿಕೊಟ್ಟಿದ್ದು, ರೈತರು ಬಹು ಬೆಳೆಯೊಂದಿಗೆ ಉತ್ತಮ ಆದಾಯ ಗಳಿಸುತ್ತಿದ್ದಾರೆ. ಮುಂದಿನ ವರ್ಷದೊಳಗೆ 5ಸಾವಿರ ಹೊಂಡ ನಿರ್ಮಿಸುವ ಗುರಿ ಇದೆ. ಇದರ ಜತೆಗೆ ಕಾಲೇಜುಗಳಲ್ಲಿ ಕೌಶಲ ತರಬೇತಿ ನೀಡುವ ಉದ್ದೇಶ ಹೊಂದಿದ್ದೇವೆ. ಇದಲ್ಲದೇ ಮಕ್ಕಳಿಗೆ ಇಂಗ್ಲಿಷ್ ಕಲಿಕಾ ಯೋಜನೆಯು ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಈ ಬಾರಿ ಜೋಡಣೆ ಉದ್ದೇಶ, ನಾವೀನ್ಯತೆ ಮತ್ತು ಪರಿಣಾಮ (ಅಲೈನಿಂಗ್ ಇಂಟೆನ್‌ಷನ್, ಇನ್ನೋವೇಶನ್ ಆ್ಯಂಡ್ ಇಂಪ್ಯಾಕ್ಟ್) ಪರಿಕಲ್ಪನೆಯಡಿ ಕೃಷಿ ಅಭಿವೃದ್ಧಿ, ಶಿಕ್ಷಣ ಹಾಗೂ ಸಣ್ಣ ಉದ್ಯಮಶೀಲತೆ ಬೆಳವಣಿಗೆ ಕುರಿತು ಸಂವಾದ ನಡೆಯಲಿದೆ ಎಂದರು.

ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಜವಾಬ್ದಾರಿಗೆ (ಸಿಎಸ್ಆರ್) ಯೋಜನೆಯಡಿ ಪ್ರತಿ ವರ್ಷ 20 ಸಾವಿರ ಕೋಟಿ ರೂ. ಸಂಗ್ರಹವಾಗುತ್ತಿದೆ. ಈ ಅನುದಾನ ಇದುವರೆಗೆ ಅನುತ್ಪಾದಕತೆ ಮಾತ್ರ ಬಳಕೆಯಾಗುತ್ತಿದ್ದು, ಕೃಷಿ, ಶಿಕ್ಷಣ ಮತ್ತು ಸಣ್ಣ ಉದ್ಯಮಶೀಲತೆ ಕ್ಷೇತ್ರಗಳಲ್ಲೂ ಉಪಯೋಗಿಸಬಹುದು ಎಂಬುದರ ಬಗ್ಗೆ ಚರ್ಚಿಸಲಾಗುತ್ತದೆ. ಕೇಂದ್ರ ಕೃಷಿ ಇಲಾಖೆ ಕಾರ್ಯದರ್ಶಿ ವಸುಧಾ ಮಿಶ್ರಾ, ಏರಿಯನ್ ಕೆಪಿಟಲ್‌ನ ಅಧ್ಯಕ್ಷ ಮೋಹನದಾಸ್ ಪೈ, ನಬಾರ್ಡ್ ಚೇರಮನ್ ಹರಿಶಕುಮಾರ ಬನಾಲವಾಲಾ, ಹೇಮಂತ ಶರ್ಮಾ ಸೇರಿದಂತೆ ಸಾಧಕರು, ನೀತಿ ನಿರೂಪಕರು ಪ್ರಮುಖರು ಪಾಲ್ಗೊಂಡು ಸಾಮಾಜಿಕ ಪರಿಣಾಮಗಳ ಬಗ್ಗೆ ಮಾಹಿತಿ ನೀಡುವರು ಎಂದು ವಿವರಿಸಿದರು.

**ಕೌಶಲಾಭಿವೃದ್ಧಿ ಕೇಂದ್ರ ಉದ್ಘಾಟನೆ:** ಫೆಬ್ರವರಿ 2ರಂದು ಗೋಕುಲ ರಸ್ತೆಯಲ್ಲಿರುವ ಕೌಶಲಾಭಿವೃದ್ಧಿ ಕೇಂದ್ರವನ್ನು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಉದ್ಘಾಟಿಸುವರು. ಈ ಕೇಂದ್ರದಲ್ಲಿ 800 ಯುವತಿಯರು, 600 ಯುವಕರು ಕೌಶಲ ತರಬೇತಿ ಪಡೆಯುತ್ತಿದ್ದಾರೆ ಎಂದು ಗುರುರಾಜ್ ದೇಶಪಾಂಡೆ ವಿವರಿಸಿದರು. ಇದೇ ಕೇಂದ್ರದಲ್ಲಿ ಫೆ 1ರಂದು ನವೋದ್ಯಮಿಗಳ ಸಮಾವೇಶ, 2ರಂದು ಸ್ಟಾರ್ಟ್‌ಅಪ್ ಡೈಲಾಗ್ ಜರುಗಲಿದೆ. ನಾನಾ ರಾಜ್ಯಗಳಿಂದ 400 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಯುವ ಸಮಿತ್‌ನಲ್ಲಿ 1ಸಾವಿರ ನವೋದ್ಯಮಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಡಾ. ಜಯಶ್ರೀ ದೇಶಪಾಂಡೆ, ಫೌಂಡೇಶನ್ ಸಿಇಒ ವಿವೇಕ ಪವಾರ್, ಇಒಒ ಪಿ.ಎನ್. ನಾಯಕ್ ಇದ್ದರು.